SC 5/2023
PW.12

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.12**

**ಚಾಸಾ.22**

| | | |
|---|---|---|
| ಸಾಕ್ಷಿದಾರರ ಹೆಸರು | - | ಹೇಮಲತಾ |
| ಗಂಡನ ಹೆಸರು | - | ದಿನೇಶ್ ಸಪಲಿಗ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ಬಜೆ. |

ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ಆರೋಪಿ ನನ್ನ ಗಂಡ. ನನ್ನ ಗಂಡ ಮೊದಲು ಮುಂಬೈನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿಕೊಂಡಿದ್ದನು. ಆ ಸಮಯ ನಾನು ಸಹಾ ಮುಂಬೈನಲ್ಲಿ ವಾಸ ಮಾಡಿಕೊಂಡಿದ್ದೆ. 2019 ನೇ ಸಾಲಿನಲ್ಲಿ ವಾಪಾಸ್ಸು ಬಜೆ ಊರಿಗೆ ಬಂದಿರುತ್ತೇವೆ. ನಂತರ ನನ್ನ ಗಂಡ ಬ್ರಹ್ಮಾವರದ ಹೇರೂರಿನಲ್ಲಿ ಪಿಂಗಾರ ಎಂಬ ಸ್ವಂತ ಮಾಂಸಾಹಾರಿ ಹೋಟೆಲ್ ನಡೆಸಲು ಪ್ರಾರಂಭಿಸಿದರು. ವ್ಯವಹಾರದ ಬಗ್ಗೆ ಮೂರು ನಾಲ್ಕು ಲಕ್ಷ ರೂಪಾಯಿ ಸಾಲ ಮಾಡಿದ್ದೆವು.

2. ಮೃತ ಕೃತಿಕ್ ಈತನ ಪರಿಚಯ ಇದೆ. ಆತ ನನ್ನ ದೊಡ್ಡಪ್ಪನ ಮಗ. ಕೃತಿಕ್ ನ ತಂದೆ ಮರದಿಂದ ಬಿದ್ದು ಮೃತರಾಗಿರುತ್ತಾರೆ. ಮೃತ ಕೃತಿಕ್ ಹುಡುಗಿಯರ ಜೊತೆ ಸಂಬಂಧ, ಮದ್ಯಪಾನ ಮಾಡುತ್ತಾ ಹಣ ದುಂದು ವೆಚ್ಚ ಮಾಡುತ್ತಿದ್ದನು. ಕೃತಿಕ್ ನಮ್ಮೊಂದಿಗೆ ಚೆನ್ನಾಗಿದ್ದು,

ನಮ್ಮ ಮನೆಗೆ ಬಂದು ಹೋಗುತ್ತಿದ್ದ ಮತ್ತು ನಮ್ಮ ಸಂಪರ್ಕದಲ್ಲಿದ್ದ. ಆರೋಪಿ ಜೊತೆ ಮೃತ ಕೃತಿಕ್ ಸಹಜ ಸಂಬಂಧ ಹೊಂದಿದ್ದ.

3. 2022 ನೇ ಸಾಲಿನಲ್ಲಿ ಕೃತಿಕ್ ನಮ್ಮ ಮನೆಯ ಹತ್ತಿರದ ಒಂದು ಹಾಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಂತರ ವಿಷಯ ತಿಳಿದು ನಾವು ಆತ ಆತ್ಮಹತ್ಯೆ ಮಾಡಿಕೊಂಡಿರುವ ಸ್ಥಳಕ್ಕೆ ಪೋಲಿಸರು ಬಂದ ಮೇಲೆ ಹೋಗಿರುತ್ತೇವೆ. ಮೃತ ಕೃತಿಕ್ ಮತ್ತು ಶಾರದ ಅತೀ ಒಡನಾಟ ಹೊಂದಿದ್ದರು. ಶಾರದಳ ವಿಚಾರದಲ್ಲಿ ಆತ ನನ್ನ ಗಂಡನ ಬಳಿ ಮಾತನಾಡುತ್ತಿದ್ದ ಬಗ್ಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಕಡತದಲ್ಲಿರುವ ಮಹಜರಿನ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, **ಆದರೆ ಸದ್ರಿ ಮಹಜರಿನ ಮೂಲ ಪ್ರತಿ ಕಡತದಲ್ಲಿ ಲಭ್ಯವಿಲ್ಲದೇ ಇರುವ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.